# ಚಿಂತನದ ಬೆಂಕಿಕಡ್ಡಿ — ಝೆನ್


● *ನಿರೂಪಣೆ* : ಪ್ರೊ.ಕೆ.ಬಿ.ಪ್ರಭುಪ್ರಸಾದ್, ಮೈಸೂರು; *ಚಿತ್ರಗಳು* : ಬಿ.ಕೆ.ಸೋಮಶೇಖರ್, ಬೆಂಗಳೂರು

ಝೆನ್ ಅಂತರ್ಮುಖಿಯಾದ ಸಾಧನೆ. ಧ್ಯಾನ, ಜ್ಞಾನ ಎಂಬ ಪದಗಳನ್ನೇ ಚೀನಿ ಉಚ್ಚಾರಣೆಯಲ್ಲಿ ಝೆನ್ ಎನ್ನುತ್ತಾರೆ. ೬ನೇ ಶತಮಾನದಲ್ಲಿ ಬೋಧಿಧರ್ಮ ಎಂಬ ಒಬ್ಬ ಬೌದ್ಧ ಭಿಕ್ಷು ಚೀನಾದಲ್ಲಿ ಇದನ್ನು ಹುಟ್ಟುಹಾಕಿದ. ಆತನೇ ಮೊದಲ ಝೆನ್‌ಗುರು. ೧೨ನೆ ಶತಮಾನದ ವೇಳೆಗೆ ಚೀನಾದಲ್ಲೆಲ್ಲಾ ಹರಡಿ ಬುದ್ಧಿವಂತರನ್ನು ಚಕಿತಗೊಳಿಸುತ್ತ ಚಿಂತನೆಯ ಖುಷಿಕೊಡುತ್ತಿದ್ದ ಝೆನ್ ಜಪಾನ್ ದೇಶಕ್ಕೆ ಕಾಲಿಟ್ಟಿತು.

ಝೆನ್ ಒಂದು ಪ್ರತ್ಯೇಕ ಧರ್ಮವಲ್ಲ; ಪಂಥವಲ್ಲ. ಬದುಕನ್ನು ಕುರಿತು, ಇರವನ್ನು ಕುರಿತು ವಿಶಿಷ್ಟ ಬಗೆಯ ದೃಷ್ಟಿ, ವಿಶೇಷ ರೀತಿಯ ಆಲೋಚನೆ. ನಿಜದಲ್ಲಿ ಯಾವುದಾದರೊಂದು ವಿಷಯ ಕುರಿತು ದೃಷ್ಟಿಹಾಯಿಸಿ, ಕೊಂಚ ಆಳವಾಗಿ ಚಿಂತನೆ ಮಾಡಿದಾಗ ಆಗುವ ಬೋಧೆ; ಬೋಧನೆಯಲ್ಲ. ಅನುಭವವೇದ್ಯವಾದುದು, ಅನುಭವ ಪ್ರಧಾನವಾದುದು. ಶಾಸ್ತ್ರ–ತತ್ತ್ವ–ಸಿದ್ಧಾಂತಗಳು ಮುಖ್ಯ ಅಲ್ಲ. ಅವುಗಳ ಸಾರ, ಅದಕ್ಕಿಂತ ಮಿಗಿಲಾಗಿ ಅನುಭವ ಮುಖ್ಯ. ವಿವರಿಸುವ ಮಾತುಗಳು ಅನವಶ್ಯಕ. ವಿವರಿಸಿದರೆ ಹಾಳಾಗುವಷ್ಟು ಸೂಕ್ಷ್ಮವಾದುದು, ನವುರಾದುದು.

ಒಂದು ಸಣ್ಣ ಕಥೆ, ಸಣ್ಣ ಪ್ರಸಂಗ, ದೃಷ್ಟಾಂತ, ಕೊಂಚ ಚಿಂತನದ ಬೆಂಕಿಕಡ್ಡಿ ಗೀಚಿದರೆ ಸಾಕು ಹೊತ್ತಿ ಬೆಳಕಾಗುತ್ತದೆ. ಹೊತ್ತಿದ ಮೇಲೆ ಆರಿ ಹೋಗದು. ಬೆಳಕಾಗಿ ಮನಸ್ಸಿನಲ್ಲಿ ನಿಲ್ಲುತ್ತದೆ. ಎಂಥಾ ಸಂದರ್ಭದಲ್ಲೂ ವಿಚಲಿತವಾಗದ ಸಮಾಧಾನ ಚಿತ್ತ, ಮನಶ್ಶಾಂತಿ, ತೃಪ್ತಿ, ಪ್ರಸನ್ನತೆ, ಚುರುಕು ಬುದ್ಧಿ, ಜಾಣು, ಅಸಂಪ್ರದಾಯಿಕವಾದ ಆಲೋಚನಾ ರೀತಿ, ತಿಳಿವಳಿಕೆ, ನಿರ್ಲಿಪ್ತತೆ, ತ್ಯಾಗಮನೋಭಾವ–ಇವು ಝೆನ್ ಗುರುಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಲಕ್ಷಣಗಳು.

ಝೆನ್ ಕತೆಗಳನ್ನು ಓದುವುದೇ ಒಂದು ಸುಖ. ಎರಡು–ಮೂರು ನಿಮಿಷ ಸಾಕು, ಓದಿಮುಗಿಸಲು. ಬಹಳ ಕಾಲ (ಸಾಧ್ಯವಾದರೆ) ಮನನ ಮಾಡುವ ಹಾಗಿರುತ್ತವೆ. ತತ್ಕಾಲದ ಅನುಭವವಂತೂ ಸಂತೋಷದಾಯಕವಾದುದು. ಇದರ ರುಚಿಯನ್ನು ಈ ಹಿಂದೆ ಆಗಲೇ 'ವಿವೇಕಪ್ರಭ'ದ ವಾಚಕರಿಗೆ ಹತ್ತಿಸಿದ್ದಾಗಿದೆ (ಡಿಸೆಂಬರ್ ೨೦೦೪ರ ಸಂಚಿಕೆಯಲ್ಲಿ). ಈಗ ಇನ್ನಷ್ಟು ಕತೆಗಳನ್ನು, ಸ್ವಾರಸ್ಯವಾದವುಗಳನ್ನು ಆಯ್ದು, ಮುಂದಿಡುತ್ತಿದ್ದೇನೆ. ಓದಿ, ಚಿಂತಿಸಿ, ಸುಖಿಸಬಹುದು.



### ಕತೆ–೧

ಜಪಾನಿನಲ್ಲಿ ನ್ಯಾನಿನ್ ಎಂಬ ಹೆಸರಿನ ಒಬ್ಬ ಝೆನ್ ಗುರು ಇದ್ದ. ಆತನ ಖ್ಯಾತಿ ದೂರ ದೂರಕ್ಕೂ ಹಬ್ಬಿತ್ತು. ವಿಶ್ವವಿದ್ಯಾನಿಲಯದ ಪ್ರೊಫೆಸರೊಬ್ಬರು ಝೆನ್ ಬಗ್ಗೆ ತಿಳಿಯಲು ಅವನ ಬಳಿಗೆ ಬಂದರು. ದೊಡ್ಡ ವಿದ್ವಾಂಸರೂ ಬಹುಶಾಸ್ತ್ರ ಪಾರಂಗತರೂ ಆಗಿದ್ದ ಅವರನ್ನು ನ್ಯಾನಿನ್ ಆದರದಿಂದ ಸ್ವಾಗತಿಸಿದ. ಪ್ರೊಫೆಸರ್ ಕೈಕಾಲು ಮುಖ ತೊಳೆದುಕೊಂಡ ಬಳಿಕ, ಗುರು ಅವರನ್ನು ಟೀ ಕುಡಿಯಲು ಕರೆದು ಸುಖಾಸನದ ಮೇಲೆ ಕೂರಿಸಿ ಅವರ ಮುಂದೆ ಮಣೆಯ ಮೇಲೆ ಪಿಂಗಾಣಿ ಬಟ್ಟಲಿಟ್ಟು ಅದರೊಳಗೆ ತಾಜಾ ಟೀಯನ್ನು ಸುರಿಯತೊಡಗಿದ. ಪ್ರೊಫೆಸರ್‌ರು ಸುಪ್ರಸನ್ನರಾಗಿ ಅದನ್ನೇ ನೋಡುತ್ತ ಝೆನ್ ಬಗ್ಗೆ ಎಲ್ಲವನ್ನೂ ತಿಳಿಸಿಕೊಡಬೇಕೆಂದು ಗುರುವಿನಲ್ಲಿ ವಿನಂತಿಸಿಕೊಂಡರು. ಅವರು ಬಟ್ಟಲು ತುಂಬಿದ ಮೇಲೂ ಟೀಯನ್ನು ಸುರಿಯುತ್ತಲೇ ಇದ್ದರು. ಟೀ ಹೊರಕ್ಕೆ ಚೆಲ್ಲತೊಡಗಿತು. ಪ್ರೊಫೆಸರ್‌ರು ಅದನ್ನು ನೋಡಿ ತಡೆಯಲಾರದೆ, "ಮಹಾಶಯರೇ ಇದೇನು ಮಾಡುತ್ತಿದ್ದೀರಿ? ಬಟ್ಟಲು ಆಗಲೇ ತುಂಬಿಹೋಗಿದೆ. ಆದರೂ ಟೀ ಸುರಿಯುತ್ತಲೇ ಇದ್ದೀರಲ್ಲ, ಅದು ಆಚೆ ಹರಿದು ವ್ಯರ್ಥವಾಗುತ್ತಿದೆಯಲ್ಲಾ" ಎಂದರು. ಗುರುವು ಸ್ವಲ್ಪವೂ ವಿಚಲಿತರಾಗದೆ ಕಣ್ಣಲ್ಲೇ ನಗುವನ್ನು ಮಿನುಗಿಸುತ್ತ, "ನೀವೂ ಹೀಗೇ ನಾನಾ ಶಾಸ್ತ್ರಗ್ರಂಥಗಳಿಂದ ಎಷ್ಟೆಷ್ಟೋ ವಿಷಯಗಳನ್ನೂ, ಜೊತೆಗೆ ನಿಮ್ಮ ಚಿಂತನೆ,

ರೋಚಕ ಪ್ರಸಂಗಗಳ, ಕಥೆಗಳ ಹಾಗೂ ಜೀವನಾನುಭವಗಳ ಮೂಲಕ ಬದುಕಿನ ರಹಸ್ಯವನ್ನು ಅರಿಯುವ ಝೆನ್ ವಿಧಾನವನ್ನು ವಿವರಿಸಿರುವ ಶ್ರೀ ಪ್ರಭುಪ್ರಸಾದ್ ಅವರು ಕನ್ನಡದ ಹೆಸರಾಂತ ಲೇಖಕರು ಮತ್ತು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.

ಅಭಿಪ್ರಾಯಗಳನ್ನೂ ತಲೆಯ ತುಂಬ ತುಂಬಿಕೊಂಡಿದ್ದೀರಿ. ನಿಮ್ಮ ಮಸ್ತಕದ ಬಟ್ಟಲು ತುಂಬಿಹೋಗಿದೆ. ಅದರ ಮೇಲೆ ಝೆನ್ ವಿಷಯವನ್ನು ಸುರಿದರೆ ಹೇಗೆ? ಮೊದಲು ಅದನ್ನು ಖಾಲಿ ಮಾಡದೆ ಬಂದಿರುವ ನಿಮಗೆ ಝೆನ್ ಬಗ್ಗೆ ಏನು ತಾನೆ ಹೇಳಲಿ? ನೀವದನ್ನು ಬರಿದುಮಾಡಿಕೊಂಡರೆ ಝೆನ್ ಎಂದರೇನು ಎಂಬುದನ್ನು ತೋರಿಸಿಕೊಡುವೆ" ಎಂದ ಆಚಾರ್ಯ ನ್ಯಾನಿನ್!

ಕತೆ–೨

ಝೆನ್ ಗುರು ಹಾಕುಯಿನ್ ಅವರ ಬಗ್ಗೆ ಸುತ್ತಮುತ್ತಲ ಜನರಿಗೆ ತುಂಬಾ ಗೌರವ ಭಾವನೆಯಿತ್ತು. ನಿಜವಾದ ಯತಿ ಎಂದರೆ ಅವರು, ಅವರದು ಪರಿಶುದ್ಧವಾದ ಜೀವನ, ಪವಿತ್ರವಾದ ಹೃದಯ ಎಂದು ತಿಳಿದಿದ್ದರು. ಅವರ ಮಾತು ಕೇಳಲು, ಸೇವೆ ಮಾಡಲು ಹಲವಾರು ಯುವಕ–ಯುವತಿಯರು ಸ್ವಯಂಪ್ರೇರಣೆಯಿಂದ ಆಶ್ರಮಕ್ಕೆ ಬಂದು ಹೋಗುತ್ತಿದ್ದರು.



ಆಶ್ರಮದ ಹತ್ತಿರವೇ ಒಂದು ಉಪಾಹಾರ ಗೃಹ. ಅದನ್ನು ನಡೆಸುತ್ತಿದ್ದ ಗೃಹಸ್ಥನ ಮಗಳು ತುಂಬಾ ಚೆಲುವೆ. ಆಕೆಯೂ ಆಶ್ರಮಕ್ಕೆ ಬಂದು ಏನಾದರೂ ಕೆಲಸ ಮಾಡಿಹೋಗುತ್ತಿದ್ದಳು. ಒಮ್ಮೆ ಇದ್ದಕ್ಕಿದ್ದ ಹಾಗೆ ಆಕೆಯ ತಾಯಿತಂದೆಯರಿಗೆ ಆಕೆ ಗರ್ಭಿಣಿಯಾಗಿರುವುದು ತಿಳಿಯಿತು. ಮದುವೆಯೇ ಆಗದ ಆಕೆ ಈ ಸ್ಥಿತಿಯನ್ನು ಹೇಗೆ ತಂದುಕೊಂಡಳು ಎಂದು ವಿಪರೀತ ಕೋಪ ಬಂದು ಕೆಂಡಾಮಂಡಲವಾದರು. ಹೊಟ್ಟೆಯಲ್ಲಿರುವ ಮಗುವಿನ ತಂದೆ ಯಾರು ಎಂದು ಅವರು ಆಕೆಯನ್ನು ಎಷ್ಟು ಬಗೆಯಾಗಿ ಕೇಳಿದರೂ ಆಕೆ ಬಾಯಿ ಬಿಡಲಿಲ್ಲ. ಬಾಯಿಬಿಡಿಸಬೇಕೆಂದು ಅವರು ಕೊಟ್ಟ ಚಿತ್ರಹಿಂಸೆಯನ್ನು ತಾಳಲಾರದೆ ಕೊನೆಗೆ, ಹೊಟ್ಟೆಯಲ್ಲಿನ ಮಗುವಿನ ತಂದೆ ಯತಿ ಹಾಕುಯಿನ್ ಎಂದು ಹೇಳಿಬಿಟ್ಟಳು. ಎಲಾ! ಕಳ್ಳ ಸನ್ಯಾಸಿ! ಎಂದು ಬೈಯುತ್ತಾ, ತಮ್ಮ ಮಗಳು ಹೇಳಿದುದು ನಿಜವೇ ಎಂದು ತಿಳಿಯಲು ಆತನ ಬಳಿಗೆ ಹೋಗಿ, "ನಮ್ಮ ಮಗಳು ತನ್ನ ಹೊಟ್ಟೆಯಲ್ಲಿರುವ ಮಗುವಿನ ತಂದೆ ನೀವು ಎನ್ನುತ್ತಾಳೆ. ನೀವು ಹೀಗೆ ಎಂದು ತಿಳಿದಿರಲಿಲ್ಲ," ಎಂದರು. ಆತ ಶಾಂತವಾಗಿ "ಹಾಗೇನು?" ಎಂದು ಸುಮ್ಮನಾದ. ಮುಂದೇನು ಹೇಳಬೇಕು, ಮಾಡಬೇಕು ಎಂದು ತಿಳಿಯದೇ ಹೋದರೂ, ಸದ್ಯ ನಿಜವನ್ನೊಪ್ಪಿಕೊಂಡರಲ್ಲ ಎಂದು ಸಮಾಧಾನ ಪಟ್ಟುಕೊಂಡು ಅವರು ಹಿಂತಿರುಗಿದರು. ಮಗು ಹುಟ್ಟಿದ ಬಳಿಕ ಅದನ್ನು ತಂದು ಅವನ ವಶಕ್ಕೊಪ್ಪಿಸಿದರು. ಆತ ಯಾವ ಮಾತೂ ಆಡದೆ ಮಗುವಿನ ಲಾಲನೆ–ಪಾಲನೆ ಮಾಡತೊಡಗಿದ. ಅಷ್ಟು ವೇಳೆಗೆ ಆತನ ಮಾನ–ಮರ್ಯಾದೆಯೆಲ್ಲ ಹಾಳಾಗಿ ಹೋಗಿಬಿಟ್ಟಿತ್ತು. ಯಾರೂ ಆತನ ಆಶ್ರಮದ ಕಡೆ ಸುಳಿಯುತ್ತಿರಲಿಲ್ಲ. ಅದೊಂದಕ್ಕೂ ಆತ ತಲೆ ಕೆಡಿಸಿಕೊಳ್ಳದೆ ಎಂದಿನಂತೆ ತನ್ನ ಪಾಡಿಗೆ ತಾನು ಇರುತ್ತಿದ್ದ. ಮಗುವಿನ ಪೋಷಣೆಯ ಹೊಣೆಯೂ

ಸೇರಿದ್ದು ಬಿಟ್ಟರೆ, ಯತಿಯ ದಿನಚರಿಯಲ್ಲಿ ಇನ್ನಾವ ವ್ಯತ್ಯಯವೂ ಆಗಲಿಲ್ಲ. ಬಹಳ ಪ್ರೀತಿಯಿಂದ ಮಗುವಿನ ಜೋಪಾನ ಮಾಡಿದ. ನೆರೆಹೊರೆಯಿಂದ ಹಾಲು ಮತ್ತು ಮಗುವಿನ ಅವಶ್ಯಕತೆಗಳಿಗೆ ಏನೇನು ಬೇಕೊ ಎಲ್ಲವನ್ನೂ ತಂದು ಒದಗಿಸುತ್ತಿದ್ದ. ಮಗುವಿನ ಮೇಲೆ ಪ್ರೀತಿಯನ್ನು ತೋರಿಸುತ್ತಿದ್ದ. ಅದರ ತಾಯಿಯನ್ನೂ ದೂರಲಿಲ್ಲ. ದೂರದಿಂದಲೆ ಇದೆಲ್ಲವನ್ನೂ ನೋಡುತ್ತಿದ್ದ ಆಕೆಗೆ ತಡೆಯಲಾಗಲಿಲ್ಲ. ತನ್ನ ತಂದೆ–ತಾಯಿಯರಿಗೆ ಸತ್ಯವನ್ನು ಹೇಳಿಬಿಟ್ಟಳು, ಮಗುವಿನ ನಿಜವಾದ ತಂದೆ ಮೀನು ಮಾರುಕಟ್ಟೆಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಯುವಕ, ಇಂಥವನು ಎಂದು.

ತಂದೆ–ತಾಯಿಯರಿಗೆ ಆ ಪವಿತ್ರಶೀಲದ ಯತಿಯ ಮೇಲೆ ಮಿಥ್ಯಾರೋಪ ಮಾಡಿದೆವಲ್ಲಾ ಎಂದು ಬಹಳ ಖೇದವಾಯಿತು. ಯತಿಯ ಕ್ಷಮೆ ಕೇಳಲು ಕೂಡಲೆ ಆತನ ಬಳಿಗೆ ಓಡಿದರು. ಉದ್ದಂಡ ನಮಸ್ಕಾರ ಮಾಡಿ ಕ್ಷಮೆ ಬೇಡಿ ಮಗುವನ್ನು ವಾಪಾಸು ಕರೆದುಕೊಂಡು ಹೋಗುವ ತಮ್ಮ ಅಪೇಕ್ಷೆಯನ್ನು ತಿಳಿಸಿದರು. "ನಿಮ್ಮ ಮೇಲೆ ವೃಥಾ ಆಪಾದನೆ ಮಾಡಿದೆವು. ಮಗಳು ನಿಜಸಂಗತಿಯನ್ನು ಹೇಳಿದಮೇಲೆ ನಮ್ಮ ತಪ್ಪಿನ ಅರಿವಾಯಿತು" ಎಂದರು. ಆಗಲೂ ಆತ ಶಾಂತವಾಗಿ ಹೇಳಿದ, "ಹೌದೇ? ಹಾಗೇನು!" ಇದು ಝೆನ್ ಮನೋಧರ್ಮ.

**ಕತೆ–೩**



ಝೆನ್ ಗುರು ಬಾಂಕೇ ಎನ್ನುವವನ ಪ್ರವಚನಗಳನ್ನು ಕೇಳಲು ಊರಜನರೆಲ್ಲ ಬರತೊಡಗಿದರು. ಝೆನ್ ಅನುಯಾಯಿಗಳು, ವಿದ್ಯಾರ್ಥಿಗಳು ಮಾತ್ರವಲ್ಲ, ಸಮಾಜದ ಎಲ್ಲ ವರ್ಗದವರೂ, ಶ್ರೀಮಂತರೂ, ಅಧಿಕಾರಿಗಳೂ ಸಹ ಬಂದು ಕೇಳಲು ಕುಳಿತುಕೊಳ್ಳುತ್ತಿದ್ದರು. ಏಕೆಂದರೆ ಗುರುಗಳ ಉಪನ್ಯಾಸಗಳು ಬಹು ಸರಳವಾಗಿರುತ್ತಿದ್ದವು. ದೊಡ್ಡ ದೊಡ್ಡ ಗ್ರಂಥಗಳಿಂದ ಶಾಸ್ತ್ರಗಳಿಂದ ಆಯ್ದ ವಾಕ್ಯಗಳನ್ನು ಉದ್ಧರಿಸುತ್ತಿರಲಿಲ್ಲ. ಆಡಂಬರದ ವಿದ್ವತ್ ಪ್ರದರ್ಶನದ ಕಠಿಣ ಶಬ್ದಗಳನ್ನು ಬಳಸುತ್ತಿರಲಿಲ್ಲ. ಹೃದಯದಿಂದ ಹೊರಟು ನೇರವಾಗಿ ಕೇಳುಗರ ಹೃದಯಗಳಿಗೆ ತಲುಪುವಂತಿದ್ದ ಈ ಉಪನ್ಯಾಸಗಳ ಕೀರ್ತಿ ದೂರ ದೂರದ ಪ್ರದೇಶಗಳಿಗೂ ಹರಡಿ ಅಲ್ಲಿಂದಲೂ ಜನ ಬರತೊಡಗಿದರು.

ನಿಚಿರೆನ್ ಪಂಥದ ಆಚಾರ್ಯನಿಗೆ ಕೋಪ, ಅಸಮಾಧಾನ ಉಂಟಾದವು. ತನ್ನ ಸಭೆಗೆ ಬರುತ್ತಿದ್ದವರೆಲ್ಲರೂ, ಜೊತೆಗೆ ತನ್ನ ಪಂಥದವರೂ ಬಾಂಕೇನ ಉಪನ್ಯಾಸ ಕೇಳಲು ಹೋಗುತ್ತಿದ್ದುದರಿಂದ ತನ್ನ ಉಪನ್ಯಾಸಗಳಿಗೆ ಬರುವವರ ಸಂಖ್ಯೆ ಕಡಿಮೆಯಾಗಿ ತನ್ನ ಪ್ರತಿಷ್ಠೆಗೆ ಭಂಗವುಂಟಾದಂತಾಗಿ ಕೋಪವುಕ್ಕಿತು. ಬಾಂಕೇಯನ್ನು ವಾದದಲ್ಲಿ

ಸೋಲಿಸುವ ಸಂಕಲ್ಪ ಮಾಡಿ ಅವನ ಬಳಿಗೆ ಬಂದ.

"ಏಯ್ ಜ಼ೆನ್ ಪಂಡಿತನೆ, ಒಂದು ನಿಮಿಷ ತಾಳು. ನಿನ್ನನ್ನು ಗೌರವಿಸುವವರು ನೀನು ಹೇಳಿದ ಹಾಗೆ ಕೇಳಬಹುದು. ವಿಧೇಯರಾಗಿ ನಡೆದುಕೊಳ್ಳಬಹುದು. ಆದರೆ ನಿನ್ನನ್ನು ಗೌರವಿಸದ ನನ್ನಂತಹವರೂ ಇದ್ದಾರೆಯಲ್ಲ. ನೋಡು, ನಾನು ನಿನಗೆ ವಿಧೇಯವಾಗಿರುವ ಹಾಗೆ ಮಾಡಬಲ್ಲೆಯಾ?" ಎಂದು ಸವಾಲು ಹಾಕಿದ. ಆಚಾರ್ಯ ಬಾಂಕೇ ಶಾಂತಮನಸ್ಕನಾಗಿ ಮಂದಹಾಸ ಸೂಸುತ್ತ, "ಮಾನ್ಯರೇ, ಕೊಂಚ ನನ್ನ ಈ ಪಕ್ಕಕ್ಕೆ ಬರುತ್ತೀರಾ, ನಿಮ್ಮ ಪ್ರಶ್ನೆಗೆ ಉತ್ತರ ನೀಡುತ್ತೇನೆ," ಎಂದ. ಆ ಪಂಡಿತ ಠೀವಿಯಿಂದ ಜನರ ಮಧ್ಯೆ ದಾರಿ ಮಾಡಿಕೊಂಡು ಬಂದು ಆಚಾರ್ಯನ ಪಕ್ಕದಲ್ಲಿ ನಿಂತ. ಮುಗುಳುನಗುತ್ತ ಬಾಂಕೇ ಆತನನ್ನು ತನ್ನ ಎಡಕ್ಕೆ ಬಂದು ನಿಲ್ಲಲು ಹೇಳಿದ. ಆತ ಹಾಗೆಯೆ ಎಡಕ್ಕೆ ಬಂದು ನಿಂತ. ಆಗ ಬಾಂಕೇ, "ಇಲ್ಲ, ಇಲ್ಲ, ಇದು ಸರಿಹೋಗುವುದಿಲ್ಲ. ನನ್ನ ಬಲಗಡೆ ಪಕ್ಕಕ್ಕೆ ಬನ್ನಿ, ಮಾತನಾಡಲು ಹೆಚ್ಚು ಅನುಕೂಲ," ಎಂದ. ಅದೇ ಬಿಗುವು–ಠೀವಿಗಳಿಂದ ಆತ ಬಲ ಪಕ್ಕಕ್ಕೆ ಬಂದು ನಿಂತ. ಆಗ ಆಚಾರ್ಯ ಬಾಂಕೇ ನಸುನಗುತ್ತ, "ನೋಡಿದಿರಾ, ನನ್ನ ಬಗ್ಗೆ ಗೌರವವಿಲ್ಲದಿದ್ದರೂ ಈಗ ನೀವೂ ನನಗೆ ವಿಧೇಯರಾಗಿ ನಾನು ಹೇಳಿದ ಹಾಗೆ ಕೇಳುತ್ತಿದ್ದೀರಿ. ನೀವು ತುಂಬಾ ಒಳ್ಳೆಯವರು, ಸೌಜನ್ಯಶೀಲರು. ಬನ್ನಿ, ಇಲ್ಲಿ ಕುಳಿತುಕೊಂಡು ನನ್ನ ಮಾತು ಕೇಳುವಿರಂತೆ," ಎಂದು ಹೇಳುತ್ತ ಉಪನ್ಯಾಸವನ್ನು ಶುರು ಮಾಡಿದ. ಅಹಂ ತಗ್ಗಿದ ಆ ವಿದ್ವಾಂಸ ಈಗ ಚಕಿತನಾದ. ಕೋಪ ಇಳಿದು ನಗುಬಂದಿತು.

### ಕತೆ–೪

**ಟೋ**ಕಿಯೊದಲ್ಲಿ ಚಿಕ್ಕ ಪ್ರಾಯದ ಡಾಕ್ಟರೊಬ್ಬರಿದ್ದರು. ಹೆಸರು ಕುಸುದ ಎಂದು. ಒಂದು ದಿನ ತನ್ನ ಹಳೆಯ ಸಹಪಾಠಿ ದಾರಿಯಲ್ಲಿ ಸಿಕ್ಕಾಗ, ಆತ, ಜ಼ೆನ್ ಗುರುಕುಲದಲ್ಲಿ ಶಿಷ್ಯನಾಗಿರುವುದನ್ನು ತಿಳಿದು, ಜ಼ೆನ್ ಎಂಬುದು ಏನು ಎಂದು ಕೇಳಿದ. ಆತ, "ಮಾತುಗಳಲ್ಲಿ ವಿವರಿಸಿ ಹೇಳುವುದಕ್ಕೆ ನನಗೆ ಬರುವುದಿಲ್ಲ. ಒಂದು ವಿಚಾರ ಮಾತ್ರ ಖಚಿತವಾಗಿ ಹೇಳಬಲ್ಲೆ. ಜ಼ೆನ್ ಅರ್ಥವಾದರೆ ಸಾವಿಗೆ ನೀನು ಹೆದರುವುದಿಲ್ಲ," ಎಂದ. "ಹೌದಾ! ಹಾಗಾದರೆ, ಜ಼ೆನ್ ತಿಳಿಯಲಾಶಿಸುವೆ. ಒಳ್ಳೆಯ ಗುರು ಯಾರು?"

"ನ್ಯಾನಿನ್ ಇದ್ದಾರಲ್ಲ ಅವರ ಬಳಿಗೆ ಹೋಗು."

ಕುಸುದ ಅವರ ಬಳಿಗೆ ಹೋಗುವಾಗ ತನ್ನೊಂದಿಗೆ ಒಂಬತ್ತೂವರೆ ಇಂಚಿನ ಉದ್ದದ ಒಂದು ಚೂಪಾದ ಬಾಕು ತೆಗೆದುಕೊಂಡ. ಗುರು, ಸ್ವತಃ ನಿರ್ಭಯನಾಗಿದ್ದಾನೆಯೇ ಇಲ್ಲಾ ಸಾವಿಗೆ ಹೆದರುತ್ತಾನೆಯೇ ಎಂದು ಪರೀಕ್ಷೆ ಮಾಡಲು. ಕೈಯಲ್ಲಿ ಹೊಳೆಯುವ ಹರಿತವಾದ ಕಠಾರಿ ಹಿಡಿದುಕೊಂಡು ಒಳಗೆ ಪ್ರವೇಶಿಸಿದ ಈತನನ್ನು ನೋಡಿದ ಕೂಡಲೆ ಗುರು ನ್ಯಾನಿನ್ ನಸುನಗುತ್ತಾ, "ಓ, ಬನ್ನಿ, ಬನ್ನಿ, ನಿಮ್ಮನ್ನು ನೋಡಿ ತುಂಬಾ ಕಾಲವಾಯಿತು. ಎಲ್ಲಿದ್ದೀರಿ ಈಗ? ಯಾವಾಗ ಬಂದಿರಿ?" ಎಂದು ಮುಂತಾಗಿ ಕುಶಲ ಪ್ರಶ್ನೆ ಹಾಕಿದರು. "ನನ್ನ ಪರಿಚಯ ನಿಮಗಿರಲು ಸಾಧ್ಯವಿಲ್ಲ. ಇದೇ ಮೊದಲು ನಾನು ನಿಮ್ಮನ್ನು ನೋಡುತ್ತಿರೋದು," ಎಂದ ಕುಸುದ. ದನಿ ಮೃದುವಾಗಿತ್ತು. ಗುರುವಿನ ಪ್ರೀತಿ–ಸೌಜನ್ಯಗಳಿಗೆ ಅರ್ಧ ಮೆತ್ತಗಾಗಿದ್ದ. ಅವರು, "ಓ, ಹಾಗಾ? ಇರಬಹುದು. ಇಲ್ಲಿ ಹಿಂದೆ ಒಬ್ಬರು ನಿಮ್ಮ ಥರಾನೆ ಇದ್ದರು ಶಿಷ್ಯರಾಗಿ. ಅವರಿರಬಹುದು ಎಂದು ಭಾವಿಸಿದೆ. ಆದರೇನು, ಹೊಸಬರು, ಹಳಬರು ಅಂತ ನಾವು ನೋಡೋದಿಲ್ಲ. ನೀವಿಲ್ಲಿ ಆನಂದವಾಗಿ ಇರಬಹುದು." ಎಂದರು.

ಡಾ.ಕುಸುದಾಗೆ ಈ ಪ್ರಥಮ ಅನುಭವದಿಂದ ತಾನು ತಂದಿದ್ದ ಕಠಾರಿ ಮರೆತೇ ಹೋಯಿತು. ಪರೀಕ್ಷೆ ಮಾಡಬೇಕೆಂಬ ವಿಚಾರವೂ ಮರೆಯಿತು. "ಜ಼ೆನ್ ಬಗ್ಗೆ ತಿಳಿಯಲು ಬಂದಿದ್ದೇನೆ," ಎಂದಷ್ಟು ಹೇಳಿದ. ಗುರು, "ಬಹಳ ಒಳ್ಳೆಯದು. ಜ಼ೆನ್ ಕಷ್ಟವಾದುದೇನೂ ಅಲ್ಲ. ನೀವು ಡಾಕ್ಟರು ಎಂದಿರಿ. ನಿಮ್ಮ ರೋಗಿಗಳಿಗೆ ಪ್ರೀತಿಯಿಂದ, ದಯೆಯಿಂದ ಚಿಕಿತ್ಸೆ ನೀಡಿರಿ. ಅಷ್ಟಾದರಾಯಿತು. ಜ಼ೆನ್ ಅಂದರೂ ಇಷ್ಟೇ," ಎಂದರು.

ಇದಾದನಂತರ ಕುಸುದ ಜ಼ೆನ್ ಆಚಾರ್ಯ ನ್ಯಾನಿನ್‌ರನ್ನು ಮೂರು ಸಲ ಭೇಟಿಯಾದ. ಪ್ರತಿ ಸಲ ಬಂದಾಗಲೂ ಅವರು ಹೇಳುತ್ತಿದ್ದುದು ಅದೇ ಒಂದು ಮಾತು. "ರೋಗಿಗಳನ್ನು ಚೆನ್ನಾಗಿ ನೋಡಿಕೊಳ್ಳಿ. ಪ್ರೀತಿ ತೋರಿಸಿರಿ. ಕಾಳಜಿಯಿಂದ ಚಿಕಿತ್ಸೆ ಮಾಡಿರಿ." ಒಮ್ಮೊಮ್ಮೆ ಇನ್ನೂ ಒಂದು ಮಾತನ್ನು ಸೇರಿಸುತ್ತಿದ್ದರು. "ನೀವು ಇಲ್ಲಿ ಹೀಗೆ ವೃಥಾ ಕಾಲಹರಣ ಮಾಡುತ್ತಾ ಇರಬೇಡಿ. ಹೋಗಿ, ಹೋಗಿ, ರೋಗಿಗಳು ನಿಮಗಾಗಿ ಕಾಯುತ್ತಿರುತ್ತಾರೆ," ಎಂದು. ಜ಼ೆನ್ ಎಂದರೆ ಏನೊ ಭಾರಿ ದೊಡ್ಡ ತತ್ತ್ವ ಎಂದು ಭಾವಿಸಿದ್ದ ಡಾ.ಕುಸುದಾಗೆ ಜ಼ೆನ್ ಎಂದರೆ ಇಷ್ಟೇ ಎಂಬುದು ಸ್ಪಷ್ಟವಾಗಲಿಲ್ಲ. ಇಷ್ಟೇ ಆದರೆ ಅದು ಹೇಗೆ



ಸಾವಿನ ಭಯ ನಿವಾರಣೆ ಆಗುತ್ತೆ? ಎಂಬ ಪ್ರಶ್ನೆ ಹಾಗೆಯೇ ಉಳಿಯಿತು. ಐದನೆ ಸಲ ಬಂದಾಗ ಹೇಳಿಯೇ ಬಿಟ್ಟ, "ಅಲ್ಲಾ ಗುರುಗಳೇ, ನನ್ನ ಮಿತ್ರ, ಜೆನ್ ತಿಳಿದರೆ ಸಾವಿನ ಭಯ ಹೋಗುತ್ತೆ ಎಂದು ಹೇಳಿದನಲ್ಲ! ನೀವು ನೋಡಿದರೆ ಪ್ರತಿ ಸಲ ಬಂದಾಗಲೂ, ರೋಗಿಗಳನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಹೇಳುತ್ತಿದ್ದೀರಿ. ಡಾಕ್ಟರ್ ಆಗಿ ಅದು ನನಗೆ ಗೊತ್ತಿಲ್ಲವೆ? ಅದಷ್ಟೇ ಜೆನ್ ತತ್ತ್ವ ಎಂದಾ ದರೆ ಮತ್ತೇಕೆ ನಾನು ಇಲ್ಲಿಗೆ ಬರಲಿ? ಇನ್ನು ಮೇಲೆ ಬರುವುದಿಲ್ಲ," ಎಂದ. ಗುರು ನ್ಯಾನಿನ್ ಮುಗುಳುನಕ್ಕು ಡಾಕ್ಟರ್‌ರ ಬೆನ್ನು ತಟ್ಟಿದ. "ನಾನು ನಿಮ್ಮ ವಿಚಾರದಲ್ಲಿ ತೀರ ಬಿಗಿಂಯಾಗಿ ಬಿಟ್ಟೆ, ನಿಮಗೊಂದು ಕೋಆನ್(ಸೂಕ್ತಿ ರೂಪದ ಪುಟ್ಟಕವಿತೆ) ಒಂದನ್ನು ಕೊಡುತ್ತೇನೆ," ಎಂದು ಹೇಳಿ ಜೋಷು ಎಂಬಾತನ 'ಮು' ಎಂಬ ಒಂದು ಬೆಡಗಿನ "ಕೋಆನ್" ಅನ್ನು ಕೊಟ್ಟ, ಚೆನ್ನಾಗಿ ಯೋಚಿಸಿ ಉತ್ತರವನ್ನು ಕಂಡುಕೊಳ್ಳಲಿ ಎಂದು. ಜೋಷು ಬರೆದ 'ಬಾಗಿಲಿಲ್ಲದ ದ್ವಾರ' (Gateless Gate) ಎಂಬ ಜೆನ್ ಪುಸ್ತಕದ ಮೊಟ್ಟಮೊದಲ 'ಒಡಪು' ಅದು. ಬಿಡಿಸಿದ ತಕ್ಷಣ ಝಗ್ ಎಂದು ಅರಿವಿನ ಬೆಳಕಾಗುವಂಥಾದ್ದು. 'ಮು' ಎಂದರೆ 'ಏನೂ ಇಲ್ಲ', 'ಯಾವುದೂ ಅಲ್ಲ' ಎಂದು ಪದಶಃ ಅರ್ಥ. ಅದನ್ನು ಕುರಿತು ಡಾ.ಕುಸುದ ಎರಡು ವರ್ಷಕಾಲ ಆಲೋಚನೆ ಮಾಡಿದ, ಅದರ ಅರ್ಥವನ್ನು ಬಿಡಿಸಲು. ಈ ಪ್ರಕ್ರಿಯೆಯಲ್ಲಿ ಆತ ಸ್ಥಿರಚಿತ್ತದ ನಿಖರತೆಯ ಸ್ಥಿತಿಯನ್ನು ತಲುಪಿದ. ಗುರುವಿಗೆ ಇದೆಲ್ಲವನ್ನು ಹೇಳಿದ, ಅವರು, "ಇಲ್ಲ, ನೀನಿನ್ನೂ ಜೆನ್‌ನೊಳಗೆ ಬಂದಿಲ್ಲ," ಎಂದರು. ಕುಸುದ ಮತ್ತೆ ಒಂದೂವರೆವರ್ಷ ಚಿಂತನೆಯನ್ನು ಮುಂದುವರಿಸಿದ. ಅವನ ಮನಸ್ಸು ಕದಡದ ಶಾಂತವಾದ ತಿಳಿಯಾದ ಕೊಳವಾಯಿತು. ಸಮಸ್ಯೆಗಳೆಲ್ಲ ಬಗೆಹರಿದವು. "ಏನೂ ಇಲ್ಲ–ಯಾವುದೂ ಅಲ್ಲ" ಎಂಬುದು ತಿಳಿಯಿತು. ಸತ್ಯದ ಅರಿವಾಯಿತು. ರೋಗಿಗಳ ಸೇವೆಯನ್ನು ಇನ್ನೂ ಚೆನ್ನಾಗಿ ಹೆಚ್ಚು ಸಮರ್ಪಕವಾಗಿ, ಪ್ರೀತಿ–ಕಾಳಜಿಗಳಿಂದ ಮಾಡತೊಡಗಿದ. ತಾನು ತೋರುವ ಪ್ರೀತಿ–ಕಾಳಜಿ ವಿಶೇಷ ಅನಿಸಲಿಲ್ಲ. ಆ ಭಾವವೂ ಹೋಗಿ ಡಾಕ್ಟರ್ ಮಾಡುವ ಸಹಜ ಸೇವೆ ಆಯಿತು. ಬದುಕು–ಸಾವುಗಳ ಬಗೆಗೆ ಯೋಚನೆ, ಚಿಂತೆ ಬಿಟ್ಟುಹೋದವು. ಸಾವಿನ ಚಿಂತೆಯಾಗಲಿ ಭಯವಾಗಲಿ ತಲೆಯಲ್ಲಿ ಸುಳಿಯಲಿಲ್ಲ. ಹೀಗಿರುವಾಗ ಗುರು ನ್ಯಾನಿನ್‌ರ ಬಳಿಗೆ ಹೋದ. ಅವನನ್ನು ನೋಡಿ ಆ ವೃದ್ಧ ಗುರು ಸುಮ್ಮನೆ ಮುಗುಳುನಕ್ಕರು.

ಈ ಸಲಕ್ಕೆ ಇಷ್ಟು ಕತೆಗಳು ಸಾಕು. ಹೆಚ್ಚಾದರೆ ಬೇಸರವಾದೀತು. ಮತ್ತೊಮ್ಮೆ ಇಂಥಾ ಇನ್ನೂ ಕೆಲವು ಸ್ವಾರಸ್ಯವಾದ ಕತೆಗಳನ್ನು ನಿಮ್ಮ ಮುಂದಿಡುತ್ತೇನೆ. ಅಲ್ಲಿಯವರೆಗೆ ಈ ಕತೆಗಳನ್ನೇ ಮೆಲುಕು ಹಾಕುತ್ತಾ ಇರಿ. ಬೆಳಕು ಮೂಡಿದರೆ. ಮೂಡಲಿ. ಮೂಡಿದರೆ ನೀವೂ ಜೆನ್!!

*